ಇಷ್ಟೆಲ್ಲ ಅನುಭವಗಳನ್ನು ಬೆನ್ನಿಗೆ ಕಟ್ಟಿಕೊಂಡರೂ ‘ಪದವಿ ಪೂರ್ವ’ ಕಥನದ ಮೇಲಿನ ನಂಬಿಕೆ ಎಳ್ಳಷ್ಟೂ ಕಡಿಮೆಯಾಗಲಿಲ್ಲ. ಚೊಚ್ಚಿಲ ಸಿನಿಮಾ ಆದರೆ ಅದೇ ಸೈ ಎಂದೇ ಸಂಕಲ್ಪ ಮಾಡಿದ್ದರು. ಯೋಗರಾಜ ಭಟ್ಟರು ಒಂದು ಕಡೆ ‘ಗಾಳಿಪಟ 2’ ಸಾಹಸಕ್ಕೆ ಕೈಹಾಕಿದರು. ಅದೇ ಕಾಲಘಟ್ಟದಲ್ಲಿ ಹರಿಪ್ರಸಾದ್ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ರೆಕ್ಕೆ ಕಟ್ಟಿಕೊಂಡು ನಿಂತಾಗ, ಭಟ್ಟರು ಅವರಿಗೂ ನಿರ್ಮಾಣದಲ್ಲೂ ಸಾಥ್ ನೀಡಲು ಮುಂದಾದರು. ರವಿ ಶಾಮನೂರು ಅವರು ತಮ್ಮ ಮಗ ಪೃಥ್ವಿಯನ್ನು ನಟನಾಗಿ ಪರಿಚಯಿಸಲು ಸಿದ್ಧರಾಗಿದ್ದರು. ಆಗಿನ್ನೂ ಹುಡುಗನಿಗೆ 17 ವರ್ಷ ವಯಸ್ಸು. ಅದಕ್ಕೇ ‘ಪದವಿ ಪೂರ್ವ’ ಚಿತ್ರಕಥೆಯ ಕೇಂದ್ರಪಾತ್ರಕ್ಕೆ ಆತ ಸೈ ಎನಿಸಿದ್ದು. ಎಲ್ಲವೂ ಕೂಡಿಬಂದು, ಚಿತ್ರೀಕರಣ ಶುರುವಾದದ್ದು 2020ರ ನವೆಂಬರ್‌ನಲ್ಲಿ. ಕೋವಿಡ್ ಲಾಕ್‌ಡೌನ್ ಕಾರಣದಿಂದಾಗಿ ಚಿತ್ರೀಕರಣ ಪದೇಪದೇ ಮುಂದೂಡಬೇಕಾಯಿತು. ಪೃಥ್ವಿ ಶಾಮನೂರು ಅಲ್ಲದೆ ಅಂಜಲಿ ಅನೀಶ್ ಹಾಗೂ ಯಶ್ ಶಿವಕುಮಾರ್ ಕೂಡ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಯೋಗರಾಜ್ ಭಟ್, ಅದಿತಿ ಪ್ರಭುದೇವ, ದಿವ್ಯಾ ಉರುಡಗ ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡು ಇಂಧನವಾಗಿದ್ದಾರೆ.

‘ಪಿಯು ಹಂತ ಎಲ್ಲ ವಿದ್ಯಾರ್ಥಿಗಳ ಬದುಕಿನಲ್ಲೂ ಮುಖ್ಯ. ಹೀಗಾಗಿ ನಾನು ಈ ಚಿತ್ರಕಥೆಯನ್ನು ನಾಸ್ಟಾಲ್ಜಿಕ್ ಆಗಿ ಹೇಳುವ ಮಾರ್ಗವನ್ನು ಆಯ್ಕೆ ಮಾಡಿಕೊಂಡೆ. ಮೊಬೈಲ್, ಸಾಮಾಜಿಕ ಜಾಲತಾಣ ಇರದೇಇದ್ದ 1996–97ರ ಕಾಲಘಟ್ಟದಲ್ಲಿ ಶಿವಮೊಗ್ಗದ ಪರಿಸರದಲ್ಲಿ ಕಥೆ ನಡೆಯುವಂತೆ ಚಿತ್ರಕಥೆಯನ್ನು ರೂಪಿಸಿದೆವು. ನನ್ನ ಜೊತೆಗೆ ಯೋಗಿ ಗೌಡ (ಇತ್ತೀಚೆಗೆ ಶಿವರಾಜ್‌ಕುಮಾರ್, ಅನಂತನಾಗ್, ಅಚ್ಯುತಕುಮಾರ್, ಸುಚೇಂದ್ರ ಪ್ರಸಾದ್ ತರಹದವರ ಧ್ವನಿಯನ್ನು ಅನುಕರಿಸಿ ಸದ್ದು ಮಾಡಿದ ಕಲಾವಿದ) ಸಂಭಾಷಣೆ ಬರೆದರು. ಯೋಗರಾಜ ಭಟ್ಟರು ಎಲ್ಲ ವಿಭಾಗಗಳಲ್ಲೂ ಕೈಯಾಡಿಸಿದರು. ಸಂಭಾಷಣೆಯನ್ನು ಅಲ್ಲಲ್ಲಿ ತಿದ್ದಲು ಸೂಚಿಸಿದರು. ಹಾಡುಗಳು ಯಾವ ಜಾಯಮಾನದ್ದಾಗಿರಬೇಕು ಎಂದು ಸಲಹೆ ಕೊಟ್ಟರು. ಹಾಡುಗಳನ್ನು ಬರೆದುಕೊಟ್ಟವರೂ ಅವರೇ. ಎಡಿಟಿಂಗ್ ಟೇಬಲ್ ಮೇಲೂ ಕುಳಿತರು. ಅರ್ಜುನ್ ಜನ್ಯ ಮಾಡಿದ ಹಾಡುಗಳೆಲ್ಲ ನಾವು ಅಂದುಕೊಂಡಂತೆ ಮೂಡಿದವು. ಸಂತೋಷ್ ರೈ ಪಾತಾಜೆ ಸಿನಿಮಾಟೊಗ್ರಫಿ ಔಚಿತ್ಯಕ್ಕೆ ತಕ್ಕಂತೆ ಒದಗಿಬಂತು. ಮಲ್ಟಿಪ್ಲೆಕ್ಸ್ ಪರದೆಗಳೂ ಸೇರಿದಂತೆ 100–120 ಚಿತ್ರಮಂದಿಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ಮಟ್ಟಕ್ಕೆ ನನ್ನ ಕನಸು ನನಸಾಯಿತು’ ಎಂದು ಹರಿಪ್ರಸಾದ್ ಖುಷಿ ಹಂಚಿಕೊಂಡರು.

ಒಟ್ಟು 52 ದಿನಗಳಲ್ಲಿ ಚಿತ್ರೀಕರಿಸಿದ ಸಿನಿಮಾ ಅಂದುಕೊಂಡಿದ್ದ ಬಜೆಟ್ಟನ್ನು ಮೀರಿದೆ. ಈ ಹಿಂದೆ ಎಂಜಿನಿಯರಿಂಗ್ ಕಥಾವಸ್ತುವನ್ನು ಒಳಗೊಂಡ ತೆಲುಗು ಚಿತ್ರ ‘ಹ್ಯಾಪಿ ಡೇಸ್’ ದೊಡ್ಡ ಮಟ್ಟದ ಯಶಸ್ಸನ್ನು ಕಂಡಿತ್ತು. ಹದಿಹರೆಯದ ಹಿತ್ತಲು, ಯೌವನದ ಹೊಸ್ತಿಲಿನಲ್ಲಿ ಇರುವ ಪಿಯು ಕಾಲಘಟ್ಟದ ಕಥಾನಕ ಬಹುತೇಕರಿಗೆ ರಿಲೇಟ್ ಆಗುತ್ತದೆ ಎನ್ನುವ ಪರಮ ವಿಶ್ವಾಸದಿಂದ ಹರಿಪ್ರಸಾದ್ ದೀರ್ಘ ಕಾಲದ ತನ್ನ ಕನಸನ್ನು ನೇವರಿಸುತ್ತಾ ಬಂದರು. ಪ್ರೇಕ್ಷಕ ಪ್ರಭು ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂದು ನೋಡಬೇಕು.

ಪ್ರತಿಕ್ರಿಯಿಸಿ: feedback@sudha.co.in




# ವರ್ಷಾಂತ್ಯಕ್ಕೆ ವೇದದ ರಂಗು

36 ವರ್ಷ! 125 ಸಿನಿಮಾ! ಈ ಸಮೀಕರಣವೇ ಶಿವರಾಜ್‌ಕುಮಾರ್ ಅವರ ವೃತ್ತಿಜೀವನದ ವೈಭವವನ್ನು ಹೇಳುವಂತಿದೆ. ವರ್ಷಕ್ಕೆ ಒಂದೆರಡು ಸಿನಿಮಾಗಳಿಗೆ ದಣಿಯುತ್ತಿರುವ ಸ್ಟಾರ್ ನಟರ ಕಾಲದಲ್ಲಿ, ವರ್ಷಕ್ಕೆ ಮೂರ್ನಾಲ್ಕು ಸಿನಿಮಾಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಶಿವರಾಜ್, ಈಗಲೂ ಕನ್ನಡ ಚಿತ್ರರಂಗದ ಬೇಡಿಕೆಯ ನಾಯಕನಟರಲ್ಲೊಬ್ಬರು. ಅವರ ಅಭಿನಯದ 125ನೇ ಸಿನಿಮಾ ‘ವೇದ’ ಬಿಡುಗಡೆಗೆ ಈಗ ದಿನಾಂಕ ನಿಕ್ಕಿಯಾಗಿದೆ.

ಕನ್ನಡದ ಜೊತೆಗೆ ತೆಲುಗು ಹಾಗೂ ತಮಿಳು ಭಾಷೆಗಳಲ್ಲೂ ‘ವೇದ’ ತೆರೆಕಾಣಲಿದೆ. ಡಿಸೆಂಬರ್ 23ರಂದು, ‘ಕ್ರಿಸ್‌ಮಸ್’ ಸಂದರ್ಭದಲ್ಲಿ ತೆರೆಕಾಣುತ್ತಿರುವ ಈ ಸಿನಿಮಾ ಕನ್ನಡ ಚಿತ್ರರಂಗದ ವರ್ಷಾಂತ್ಯವನ್ನು ರಂಗುರಂಗುಗೊಳಿಸುವ ಎಲ್ಲ ಸಾಧ್ಯತೆಗಳಿವೆ.

‘ವೇದ’ ಚಿತ್ರದ ಬಗ್ಗೆ ನಿರೀಕ್ಷೆ ಇಟ್ಟುಕೊಳ್ಳಲು ಕಾರಣಗಳಿವೆ. ‘ವಜ್ರಕಾಯ’, ‘ಭಜರಂಗಿ’ ಹಾಗೂ ‘ಭಜರಂಗಿ–2’ ಸಿನಿಮಾಗಳ ಯಶಸ್ಸಿನ ನಂತರ ಶಿವರಾಜ್ ಹಾಗೂ ನಿರ್ದೇಶಕ ಎ. ಹರ್ಷ ಒಟ್ಟಿಗೆ ಕೆಲಸ ಮಾಡಿರುವ ಸಿನಿಮಾ ಇದಾಗಿದೆ. ‘ರಣಬೇಟೆಗಾರನ ರಕ್ತಸಿಕ್ತ ಅಧ್ಯಾಯ’ ಎನ್ನುವ ಅಡಿ ಟಿಪ್ಪಣಿ ನೋಡಿದರೆ, ‘ವೇದ’ ಚಿತ್ರ ಆ್ಯಕ್ಷನ್‌ಗೆ ಒತ್ತು ನೀಡಿರುವ ಕಥನವಾಗಿದೆ. ‘ಓಂ’, ‘ಜೋಗಿ’, ‘ಜೋಗಯ್ಯ’ ಸಿನಿಮಾಗಳ ನೆರಳು ‘ವೇದ’ ಸಿನಿಮಾದ ಮೇಲೂ ಇರುವಂತಿದೆ. ಅರವತ್ತರ ದಶಕದ ಕಥೆಯನ್ನು ನಿರ್ದೇಶಕ ಹರ್ಷ ಮರು ರೂಪಿಸಿದ್ದು, ಸಿನಿಮಾ ಅದ್ದೂರಿಯಾಗಿ ಮೂಡಿಬಂದಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಶಿವರಾಜ್ ಕುಟುಂಬವೇ ಸಿನಿಮಾ ನಿರ್ಮಿಸಿರುವುದು ಚಿತ್ರದ ಮತ್ತೊಂದು ವಿಶೇಷ. ಗೀತಾ ಶಿವರಾಜ್‌ಕುಮಾರ್ ಚಿತ್ರದ ನಿರ್ಮಾಪಕಿ. ಸ್ವಂತ ನಿರ್ಮಾಣ ಸಂಸ್ಥೆಯ ಚಿತ್ರವಾಗಿರುವುದು ಕೂಡ ‘ವೇದ’ ಮೇಲಿನ ನಿರೀಕ್ಷೆಗಳು ಹೆಚ್ಚಲು ಕಾರಣವಾಗಿದೆ. 2023ರಲ್ಲಿ ಕೂಡ ಶಿವರಾಜ್ ವರ್ಷಪೂರ್ತಿ ಸುದ್ದಿಯಲ್ಲಿರುವ ಸಾಧ್ಯತೆಯಿದೆ. ಯೋಗರಾಜ್ ಭಟ್ ನಿರ್ದೇಶನದ ‘ಕರಟಕ ದಮನಕ’ ಹಾಗೂ ಶ್ರೀನಿ ನಿರ್ದೇಶನದ ‘ಘೋಸ್ಟ್’ ಸಿನಿಮಾಗಳ ಬಗ್ಗೆ ಗಾಂಧಿನಗರದಲ್ಲಿ ಒಳ್ಳೆಯ ಮಾತುಗಳಿವೆ. ■